ಗದ್ಯ

# ಪರಿಸರ ಪ್ರೇಮಿ



ಜ್ಯೋತಿ ಶಾಲೆಯ ಮುಖ್ಯೋಪಾಧ್ಯಾಯರು ಪ್ರತಿ ನಿತ್ಯ ಬೆಳಗ್ಗೆ ವಾಯು ವಿಹಾರಕ್ಕೆ ಹೋಗುತ್ತಿದ್ದರು. ಆ ಸಮಯದಲ್ಲಿ ಒಬ್ಬ ಬಾಲಕ ಎದುರಿಗೆ ಬರುತ್ತಿದ್ದ. ಆ ಬಾಲಕನು ಒಂದು ಕೈಯಲ್ಲಿ ಪರಕೆ, ಮತ್ತೊಂದು ಕೈಯಲ್ಲಿ ಬಕೆಟ್ ಹಿಡಿದಿರುತ್ತಿದ್ದನು. ಸರಿಯಾದ ಸಮಯಕ್ಕೆ ತಪ್ಪದೇ ಭೇಟಿಯಾಗುತ್ತಿದ್ದ. ಆ ಬಾಲಕನ ನಿಯಮಿತಕ್ಕೆ ಮುಖ್ಯೋಪಾಧ್ಯಾಯರು ಮನಸ್ಸಿನಲ್ಲಿಯೇ ಮೆಚ್ಚಿಕೊಂಡಿದ್ದರು. ಮಬ್ಬು ಮಬ್ಬು ಬೆಳಕಿನಲ್ಲಿ ಅವನ ಮುಖ ಸರಿಯಾಗಿ ಕಾಣುತ್ತಿರಲಿಲ್ಲ. ಹಾಗಾಗಿ ಆತ ಒಬ್ಬ ಬಾಲಕಾರ್ಮಿಕನಿರಬಹುದೆಂದು ತಿಳಿದಿದ್ದರು.

ಒಂದು ದಿನ ಸಮೀಪದ ತಂಗುದಾಣದಲ್ಲಿ ಆ ಬಾಲಕ ಕಸ ಗುಡಿಸುವುದು ಕಾಣಿಸಿತು. ಹೌದು! ಆ ಹುಡುಗನೇ ಎಂದು ತಿಳಿದು ಮಾತನಾಡಿಸಲು ಹತ್ತಿರ ಬಂದರು. ಆ ಬಾಲಕನನ್ನು ನೋಡುತ್ತಲೇ ಆಶ್ಚರ್ಯವಾಯಿತು. ಆ ಬಾಲಕ ಇವರಿರುವ ಶಾಲೆಯ ಮೂರನೇ ತರಗತಿಯಲ್ಲಿ ಓದುತ್ತಿರುವ ತಿಪ್ಪೇಶ. ತಿಪ್ಪೇಶ ಮುಖ್ಯೋಪಾಧ್ಯಾಯರನ್ನು ನೋಡುತ್ತಲೇ ಸಂಕೋಚದಿಂದ 'ಗುಡ್ ಮಾರ್ನಿಂಗ್ ಸರ್,' ಎಂದು ಕೈ ಮುಗಿದ. ಆಗ ಮುಖ್ಯೋಪಾಧ್ಯಾಯರು 'ಇಲ್ಲೇನು ಮಾಡುತ್ತಿರುವೆ, ತಿಪ್ಪೇಶ?' ಎಂದು ಕೇಳಿದರು.





'ಸಾರ್, ಇದು ನಾನಿರುವ ಬಡಾವಣೆಯ ತಂಗುದಾಣ, ದಿನವೂ ನಾನಿಲ್ಲಿ ಕಸಗುಡಿಸಿ, ನೀರಿನಿಂದ ತೊಳೆದು ಸ್ವಚ್ಛಗೊಳಿಸುತ್ತೇನೆ,' ಎಂದನು. 'ಇದನ್ನೆಲ್ಲ ನೀನ್ಯಾಕೆ ಮಾಡುವೆ. ಇದನ್ನು ನೋಡಿಕೊಳ್ಳಲು ನಗರ ಸಭೆಯು ಆಳುಗಳಿಲ್ಲವೆ?' ಎಂದು ಕೇಳಿದರು ಮುಖ್ಯೋಪಾಧ್ಯಾಯರು. ಅದಕ್ಕೆ ತಿಪ್ಪೇಶ 'ಅದೇನೋ ನನಗೆ ತಿಳಿಯದು ಸಾರ್. ಇದು ನಮ್ಮ ಬಡಾವಣೆ, ಅಂದ ಮೇಲೆ ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಕೆಲಸ. ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕೆಂದು ತಾವೇ ಹೇಳಿದ್ದೀರಿ. ಅದಕ್ಕೆ ನನ್ನ ಕೈಲಾದ ಮಟ್ಟಿಗೆ ನಾನೇ ಮಾಡುತ್ತೇನೆ. ಅದು ನನಗೆ ಸಂತೋಷ ತಂದಿದೆ,' ಎಂದು ವಿನಯದಿಂದ ಹೇಳಿದ.



ಮುಖ್ಯೋಪಾಧ್ಯಾಯರಿಗೆ ತಿಪ್ಪೇಶನ ಮಾತು ಕೇಳಿ ಆನಂದವಾಯಿತು. ಅವನ ತಲೆಯ ಮೇಲೆ ಕೈಯಾಡಿಸಿ 'ತಿಪ್ಪೇಶ, ನೀನು ಒಳ್ಳೆಯ ಕೆಲಸ ಮಾಡುತ್ತಿರುವೆ. ಇದೇ ಸಮಾಜ ಸೇವೆ,' ಎಂದು ಹೇಳಿ ಹೊರಟರು.

ಶಾಲೆಯ ವಾರ್ಷಿಕೋತ್ಸವ ಸಮಾರಂಭ. ಆ ಸಮಾರಂಭಕ್ಕೆ ನಗರಸಭೆಯ ಅಧ್ಯಕ್ಷರನ್ನು ಕರೆಸಿದ್ದರು. ಬೇರೆ ಬೇರೆ ಸ್ಪರ್ಧೆಗಳಲ್ಲಿ ವಿಜೇತರಾದವರು ಬಹುಮಾನಗಳನ್ನು ಪಡೆದುಕೊಂಡರು. ಸಭಿಕರು ಸಂತೋಷದಿಂದ ಚಪ್ಪಾಳೆ ತಟ್ಟುತ್ತಿದ್ದರು. ಆಗ ಮುಖ್ಯೋಪಾಧ್ಯಾಯರು ಗಂಭೀರವಾಗಿ ಎದ್ದು ನಿಂತು ತಿಪ್ಪೇಶನಲ್ಲಿ ಪರಿಸರದ ಬಗ್ಗೆ ಇದ್ದ ಕಾಳಜಿಯ ಗುಣಗಾನ ಮಾಡಿ ಹೊಗಳಿದರು. ನಂತರ ತಿಪ್ಪೇಶನಿಗೆ 'ಪರಿಸರ ಪ್ರೇಮಿ' ಎಂಬ ಪ್ರಶಸ್ತಿಯನ್ನು ಸಭಾಧ್ಯಕ್ಷರಿಂದ ಕೊಡಿಸಿದರು. ಸಭಿಕರು ಹರ್ಷೋದ್ಗಾರದಿಂದ ತಿಪ್ಪೇಶನನ್ನು ಅಭಿನಂದಿಸಿದರು.





# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ವಾಯುವಿಹಾರ = ಹವಾಸೇವನೆ (Walking)
2. ನಿಯಮಿತ = ಗೊತ್ತಾದ (Apt)
3. ತಂಗುದಾಣ = ನಿಲ್ದಾಣ (Stop)
4. ಸಂಕೋಚ = ಹಿಂಜರಿಯುವುದು (Hesitate)
5. ಬಡಾವಣೆ = ಮನೆಗಳಿರುವ ಪ್ರದೇಶ (Extension)
6. ಆಳು = ಸೇವಕ (Servant)
7. ಸ್ವಚ್ಛತೆ = ಪರಿಶುದ್ಧತೆ (Cleanliness)
8. ವಿನಯ = ನಮ್ರತೆ (Politeness)
9. ಸಮಾರಂಭ = ಕಾರ್ಯಕ್ರಮ (Program)

## II. ವಿರುದ್ಧ ಪದಗಳನ್ನು ಬರೆಯಿರಿ.

| | | | |
|---|---|---|---|
| 1. ವಿನಯ × | | 2. ಹಗಲು × | |
| 3. ಬೆಳಕು × | | 4. ಬೇಕು × | |
| 5. ಸಂತೋಷ × | | 6. ನಿಯಮಿತ × | |
| 7. ಸಮೀಪ × | | 8. ಸಂಕೋಚ × | |

## III. ಯಾರು ಯಾರಿಗೆ ಹೇಳಿದರು?

1. "ಇಲ್ಲೇನು ಮಾಡುತ್ತಿರುವೆ, ತಿಪ್ಪೇಶ?"

______________________________

______________________________

2."ಅದೇನೋ ನನಗೆ ತಿಳಿಯದು, ಸಾರ್."

______________________________________

______________________________________

3. "ನೀನು ಒಳ್ಳೆಯ ಕೆಲಸ ಮಾಡುತ್ತಿರುವೆ."

______________________________________

______________________________________

4. "ಅದಕ್ಕೆ ನನ್ನ ಕೈಲಾದ ಮಟ್ಟಿಗೆ ನಾನೇ ಮಾಡುತ್ತೇನೆ."

______________________________________

______________________________________

## IV. ಕೊಟ್ಟಿರುವ ವಾಕ್ಯಗಳಲ್ಲಿನ ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದ ಬರೆಯಿರಿ.

1. ಮುಖ್ಯೋಪಾಧ್ಯಾಯರು ...................... ವಾಯು ವಿಹಾರಕ್ಕೆ ಹೋಗುತ್ತಿದ್ದರು.
2. ಆತ ಒಬ್ಬ ಬಾಲ ...................... ನಿರಬಹುದೆಂದು ತಿಳಿದಿದ್ದರು.
3. ನಮ್ಮ ಬಡಾವಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ...................... .
4. ಆ ಸಮಾರಂಭಕ್ಕೆ ನಗರಸಭೆಯ ...................... ಕರೆಸಿದ್ದರು.

## V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬಾಲಕನು ಕೈಯಲ್ಲಿ ಏನನ್ನು ಹಿಡಿದಿರುತ್ತಿದ್ದನು?

______________________________________

2. ಬಾಲಕನ ಹೆಸರೇನು?

______________________________________

3. ಮುಖ್ಯೋಪಾಧ್ಯಾಯರು ಮನಸ್ಸಿನಲ್ಲಿ ಮೆಚ್ಚಿಕೊಂಡದ್ದು ಏಕೆ?

______________________________________

4. ತಿಪ್ಪೇಶ ಯಾವ ತರಗತಿಯಲ್ಲಿ ಓದುತ್ತಿದ್ದನು? ಓದುತ್ತಿದ್ದ ಶಾಲೆಯ ಹೆಸರೇನು?

______________________________________

5. ತಮ್ಮ ಬಡಾವಣೆಯ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಯಾರು ಕಾರಣರು?

______________________________________

6. ತಿಪ್ಪೇಶನ ಮಾತು ಕೇಳಿ ಯಾರಿಗೆ ಆನಂದವಾಯಿತು?

___

7. ಯಾವುದು ಸಮಾಜ ಸೇವೆಯಾಗಿದೆ?

___

9. ತಿಪ್ಪೇಶನಿಗೆ ಯಾವ ಗೌರವ ದೊರಕಿತು?

___



## ಚಟುವಟಿಕೆ

1. ನಿಮ್ಮ ಮನೆಯ ಹಾಗೂ ಶಾಲೆಯ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿರಿ.
2. ಗಿಡಮರಗಳಿಗೆ ನೀರೆರೆದು ಪೋಷಿಸಿರಿ. ಇದು ಪ್ರತಿಯೊಬ್ಬರ ಕರ್ತವ್ಯ.
3. ಪ್ರತಿಯೊಬ್ಬರೂ ಒಂದೊಂದು ಮರ ಬೆಳೆಸಿ, ಹಸಿರು ಸಂಪತ್ತನ್ನು ಕಾಪಾಡಿರಿ..
4. ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿರಿ.
5. ಕಸಕಡ್ಡಿಯನ್ನು ನಿರ್ದಿಷ್ಟ ಸ್ಥಳದಲ್ಲಿಯೇ ಹಾಕಿರಿ.
6. ಮನೆಯ ಮುಂದೆ ಹಾಗೂ ಚರಂಡಿಯಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಿರಿ.

### ಗಿಡಗಳ ಚಿತ್ರಗಳನ್ನು ಅಂಟಿಸಿ

"ಪರಿಸರದ ಸ್ವಚ್ಛತೆ ನಮ್ಮೆಲ್ಲರ ಆದ್ಯತೆ"